ಉನ್ನಿಕೃಷ್ಣನ್ ತಿರಸ್ಕರಿಸಿ ಬಿಟ್ಟರು. 'ವಾರ್ಷಿಕ ರಜೆ ಮೇಲೆ ಕಳಿಸಬೇಕಾದೋರೇ ಬಹಳಜನ ಇದಾರೆ ಇನ್ನೂ. ನಿನಗೆ ಸಿಎಲ್ ಕೊಟ್ಟರೆ ಇಲ್ಲಿ ಜನ ಇರಲ್ಲ, ಅದು ಓಸಿ ಸಾಹೇಬ್ರ ಚಿಂತೆ' ಅಂತ ಸಮಜಾಯಿಶಿ ಹೇಳಿದ್ದರು ಸುಬೇದಾರಮೇಜರ್. ಆಗ ತಾನು ಓಸಿಯವರ ಮುಖ ಭೇಟಿ ಕೇಳಿದೆ, ಆಗಲೂ ಸಿಗದಾಗ ಸೈನಿಕ ಸಮ್ಮೇಳನದಲ್ಲಿ ಬೇಡಿಕೆ ಕೊಟ್ಟೆ. ಇದು ಆಜ್ಞೆಯ ಉಲ್ಲಂಘನೆ ಅಂತ ಪರಿಗಣಿಸಲ್ಪಟ್ಟಿತು. ಸೇನೆಯಲ್ಲಿ ವರಿಷ್ಠರು ಯಾವಾಗಲೂ ಸರಿ; ಅವರಿಗೇ ಅವರ ಮೇಲಿನವರ ಬೆಂಬಲ ಸಿಗುವುದು. ಇಪ್ಪತ್ನಾಲ್ಕು ಗಂಟೆಯ ಕ್ವಾರ್ಟರ್ ಗಾರ್ಡ ಡ್ಯೂಟಿಗೆ ಹಾಕಿದರು. ಒಂದೇ ಸಮ ನಿಂತು ಎದುರು ಓಡಾಡುವ ಅಧಿಕಾರಿಗಳಿಗೆ, ಫ್ಲಾಗ್ ಕಾರುಗಳಿಗೆಲ್ಲಾ ಸೆಲ್ಯೂಟು ಸಲಾಮಿಶಸ್ತ್ರ ಹೊಡೆದು ಬಸವಳಿದು ಹೋಗಿದ್ದರು. ಇವರ ಬಟಾಲಿಯನ್ ಮೂವಾಗಿ ಮೀರಠ್‌ನಲ್ಲಿ ಖಾಲಿ ಮಾಡಿದ ಮತ್ತೊಂದು ಬಟಾಲಿಯನ್ನಿನ ಜಾಗೆಗೆ ಬಂತು. ಮತ್ತೊಂದು ತಿಂಗಳಲ್ಲಿ ನಾಯಬಸುಬೇದಾರ್ ಬಡ್ತಿ ಸಿಕ್ಕಿತು. ಹೆಗಲ ಮೇಲೆ ಕೆಂಪುಪಟ್ಟಿಯ ಪಕ್ಕ ಒಂದು ನಕ್ಷತ್ರ ಬಂತು. ಕೆಳಗಿನವರಿಂದ ಸೆಲ್ಯೂಟು, ಜೂನಿಯರ್ ಕಮಿಷನ್ಡ್ ಆಫೀಸರ್ ಮೆಸ್ಸಿನಲ್ಲಿ ಊಟ, ಬೇರೆ ರೂಮು, ಸಮವಸ್ತ್ರಕ್ಕೆ ಇಸ್ತ್ರಿಮಾಡಿ, ಬೂಟು ಪಾಲಿಷ್ ಮಾಡಲು ಒಬ್ಬ ಸೇವಾದಾರ ಮುಂತಾಗಿ ಸೌಲಭ್ಯ ಸಿಕ್ಕಿತು. ಮೇಲಾಧಿಕಾರಿಯಾದಾಗಿನ ಜವಾಬ್ದಾರಿಯಲ್ಲಿ ತಾನು ಹವಾಲ್ದಾರನಿದ್ದಾಗ ರಜೆಯ ಬಗ್ಗೆ ಉಂಟಾದ ಸನ್ನಿವೇಶಕ್ಕೀಗ ಉತ್ತರ ಸಿಕ್ಕಿತ್ತು. ಎಲ್ಲಕ್ಕೂ ಮೇಲಾಗಿ ಯುದ್ಧಕ್ಷೇತ್ರ ಹೊರತುಪಡಿಸಿ ಎಲ್ಲಾಕಡೆ ಕುಟುಂಬ ಸಮೇತವಿರಲು ಉಚಿತ ವಸತಿ ಸೌಕರ್ಯಕ್ಕೆ ಹಕ್ಕುದಾರರಾದರು. ಮಗ ಪಿಯುಸಿಯಲ್ಲಿದ್ದ. ಮಗಳು ಹೈಸ್ಕೂಲು ಓದುತ್ತಿದ್ದಳು. ಗೌರಮ್ಮ ಧೈರ್ಯ ನೀಡಿದ್ದಕ್ಕೆ ಕಾಂತಮ್ಮ ಮೀರಠ್‌ಗೆ ಬಂದು ಸಂಸಾರ ಹೂಡಿದ್ದಳು. ಗಣರಾಜ್ಯೋತ್ಸವ ಪರೇಡಿಗೆ ನರಸಪ್ಪನೂ ನಿಯುಕ್ತರಾಗಿ, ದಿಲ್ಲಿಯ ರಾಜಪಥದಲ್ಲಿ ಗಂಡ ಠೀವಿಯಿಂದ ನಡೆದು ಹೋದದ್ದಕ್ಕೆ ಸಾಕ್ಷಿಯಾದಳು. ಇದೆಲ್ಲಾ ಎರಡೇ ವರ್ಷಕ್ಕೆ ಕೊನೆಗೊಂಡಿತ್ತು. ರಂಗನಾಥನಿಗೆ ಎಂಜನಿಯರಿಂಗ್ ಸೀಟು ಸಿಕ್ಕು ಸುರತ್ಕಲ್‌ಗೆ ಹೋದ. ಮನೆಯಲ್ಲಿ ಅಜ್ಜಿ ಮೊಮ್ಮಗಳು ಇಬ್ಬರೇ. ಶ್ರಾವಣಿಯೂ ಇನ್ನೊಂದು ವರ್ಷಕ್ಕೆ ಕಾಲೇಜಿಗೆ ಬೆಂಗಳೂರು ಸೇರುತ್ತಾಳೆ. ಹೆಂಡತಿಯನ್ನು ಊರಲ್ಲಿ ಬಿಡುವಾಗ 'ಕಾಂತಾ... ಮೊದಲಿನಂತೆ ಪ್ರತಿ ವರುಷಕೆ ಹೊಸ ಹರುಷವ ಮತ್ತೆ ಮತ್ತೆ ತರುವೆನು' ಅಂತ ಸಣ್ಣಕೆ ನಕ್ಕಿದ್ದರು.

'ಇನ್ನೊಂದು ಖಂಡ ಹಾಕಿಸ್ಕೋ... ನಿನ್ಹೆಂಡ್ತಿಯಷ್ಟು ರುಚಿ ಮಾಡೋರು ಈ ಊರಲ್ಲೇ ಯಾರಿಲ್ಲ.'

'ಸಂಶಯಾನೆ ಇಲ್ಲ; ಆದ್ರೆ ಹೊಟ್ಟೆ ಹಿಡೀಬೇಕಲ್ಲ! ಅಲ್ಲಾ, ಮಕ್ಕಳೂ ಬಂದಿದ್ರೆ ಚೆನ್ನಾಗಿರ್ತಿತ್ತು ಅಂದ್ಕೋತಿದ್ದೆ...'

'ಬಿಡಿ, ರಂಗನಾಥನಿಗೆ ಜರ್ಮನಿಗೆ ಕಳಿಸೋಹಾಗಿದ್ಯಂತೆ. ಹೈದರಾಬಾದ್‌ದಿಂದ ಈಗೆಲ್ಲಿ ಬರಾಕಾಗ್ತಿತ್ತು? ಶ್ರಾವಣಿ ಹೋದ ವಾರಾನೆ ಬಂದು ನೋಡ್ಕೊಂಡು ಹೋದಳಲ್ಲ? ಅಲ್ದೇ, ಅವಳಿಗೆ ಮಾಂಸದಡಿಗೆ ಅಷ್ಟೊಂದು ಇಷ್ಟದ್ದಲ್ಲ.' ಗಸಿ ಬಡಿಸಿಕೊಳ್ಳುತ್ತ ಅಂದಳು ಕಾಂತಮ್ಮ.

'ಆವತ್ನಿಂದ ಕೇಳಬೇಕಂತಿದ್ದೆ, ತಗ್ಗಿನ ಮನೆ ಪರಶುರಾಮನೂ ನೀನಿದ್ದಲ್ಲೆ ಅಲ್ವ ಇರಾದು? ಅದೇನು ಅವ್ರ ಮನೇವ್ರು ಕಾಟಾಚಾರಕ್ಕೆ ನಿನ್ಹತ್ರ ಮಾತಾಡಿದ್ಹಾಗೆ ಮಾಡಿ ಹೊರಟ್ಹೋದ್ರು ಅನಿಸ್ತಪ್ಪ ನಂಗಂತೂ...'

'ಅವನಿರೋದು ನನ್ನೆಳಗೇನೇ ಅಮ್ಮ...' ಅನ್ನುತ್ತ ಸುಮ್ಮನಾದರು. ತನಗಿಂತ ಹತ್ತುವರ್ಷದ